# ಬೆಂಗಳೂರು ಮಹಾನಗರ ಪಾಲಿಕೆ



**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:17/04/2008 ರ ನಡವಳಿಗಳು**

**ವಿಷಯ ಸಂಖ್ಯೆ:35/2008-09**

ಬಳ್ಳಾರಿ ರಸ್ತೆಯ ಪಶ್ಚಿಮದ ಹಾಗೂ ಪೂರ್ವದ ಕಡೆ ಸರ್ವೀಸ್ ರಸ್ತೆಯ ನಿರ್ಮಾಣದ ಕಾಮಗಾರಿಗಳ ಬಗ್ಗೆ.

**ಪ್ರಸ್ತಾವನೆ:**

ಕರ್ನಾಟಕ ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ ಆಕ್ಟ್ 1961ರ ಸೆಕ್ಷನ್ 14(ಬಿ) ರ ಅನ್ವಯ ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ:ಯುಡಿಡಿ/154/ಬಿ.ಇಂ.ಎಂ/ಆರ್.ಯು.ಪಿ.ಆರ್.ಎ/2004 ದಿನಾಂಕ:18/01/2005 ರ ಅನ್ವಯ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ರಸ್ತೆಗಳನ್ನು ಅಗಲೀಕರಣಗೊಳಿಸಲು ಅವಶ್ಯವಾಗಿ ಬೇಕಾಗಿರುವ ಜಮೀನಿನ ಆಸ್ತಿಯ ಮಾಲೀಕರಿಂದ ಪುಕ್ಕಟೆಯಾಗಿ ಮತ್ತು ಋಣಮುಕ್ತವಾಗಿ TDR ರೂಪದಲ್ಲಿ ಪಡೆಯಲು ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರಿಗೆ ಅಧಿಕಾರ ನೀಡಲಾಗಿದೆ. ಇದರಂತೆ 45 ರಸ್ತೆಗಳನ್ನು ಅಗಲೀಕರಣಗೊಳಿಸಲು 2ನೇ ಮಾರ್ಚ್ 2005ರಲ್ಲಿ ಪ್ರಕಟಣೆ ಹೊರಡಿಸಲಾಗಿದೆ. ಬಳ್ಳಾರಿ ರಸ್ತೆಯ ಅಗಲೀಕರಣಕ್ಕಾಗಿ ಕೆಳಗೆ ತಿಳಿಸಿರುವ ಕಾಮಗಾರಿಗಳನ್ನು ನಿರ್ವಹಿಸಬೇಕಾಗಿದ್ದು ಇದಕ್ಕಾಗಿ ಟೆಂಡರ್ ಅನ್ನು 2006/07 ಟೆಂಡರ್ ಅನುಮೋದನೆಯಾಗಿರುತ್ತದೆ. ಇವುಗಳಿಗಾಗಿ ಅಂದಾಜುಪಟ್ಟಿಗಳನ್ನು ಕರೆಯಲಾಗಿದ್ದು, 2007-08ನೇ ಸಾಲಿನ ದರಪಟ್ಟಿಯಂತೆ ತಯಾರಿಸಿದ್ದು work ಕೋಡ್ ಪಡೆಯಲಾಗಿದೆ. ಈ ಕಾಮಗಾರಿಗಳ ವಿವರ ಕೆಳಕಂಡಂತಿವೆ.

| ಕ್ರ.ಸಂ. | ಕಾಮಗಾರಿಯ ಹೆಸರು | ಅಂದಾಜುಪಟ್ಟಿಯ ಮೊತ್ತ (ಲಕ್ಷಗಳಲ್ಲಿ) | ಕಾಮಗಾರಿ ಸಂಕೇತ |
|---|---|---|---|
| 1 | Formation of service road on western side of Bellary Road near Veterinary hospital in Bangalore | 56.00 | 000-08-N-J-I-R-WD-029 |
| 2 | Formation of service road on Eastern side of Bellary Road near CBI office junction in Bangalore | 56.00 | 000-08-N-J-I-R-WD-030 |

ಈ ಅಂದಾಜುಪಟ್ಟಿಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:02/04/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:02/04/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:17/04/2008 ರ ನಡವಳಿಗಳು**

**ವಿಷಯ: ಸಂಖ್ಯೆ:36/2008-09**

ಬಳ್ಳಾರಿ ರಸ್ತೆಯ ಸರಪಳಿ 1.40 ಕಿ.ಮೀ. ನಿಂದ 1.60 ಕಿ.ಮೀ ವರೆಗೆ ರಸ್ತೆ ಅಗಲಿಕರಣ ಹಾಗೂ ಅಭಿವೃದ್ಧಿ ಕಾಮಗಾರಿಯ ಬಗ್ಗೆ.

**ಪ್ರಸ್ತಾವನೆ:**

ಬಳ್ಳಾರಿ ರಸ್ತೆಯ ಸರಪಳಿ 1.40 ಕಿ.ಮೀ. ನಿಂದ 1.60 ಕಿ.ಮೀ ವರೆಗೆ ರಸ್ತೆ ಅಗಲೀಕರಣ ಹಾಗೂ ಅಭಿವೃದ್ಧಿ ಕಾಮಗಾರಿಗೆ ರೂ.89.00 ಲಕ್ಷಗಳ ಟೆಂಡರ್ ಕರೆಯಲಾಗಿರುತ್ತದೆ. ಸದರಿ ಕಾಮಗಾರಿಗೆ ದಿನಾಂಕ:21/01/08 ರಂದು ಪೂರ್ಣಗೊಂಡ ಟೆಂಡರ್ ದಾಖಲೆಗಳನ್ನು ಸ್ವೀಕರಿಸಲಾಗಿ, ದಿನಾಂಕ: 23/01/08 ರಂದು ತಾಂತ್ರಿಕ ಬಿಡ್‌ಗಳನ್ನು ತೆರೆಯಲಾಗಿರುತ್ತದೆ. ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಇಬ್ಬರು ಗುತ್ತಿಗೆದಾರರು ಟೆಂಡರ್ ದಾಖಲೆಗಳನ್ನು ಸಲ್ಲಿಸಿದ್ದು, ಸದರಿಯವರ ತಾಂತ್ರಿಕ ಬಿಡ್‌ಗಳ ಮೌಲ್ಯಮಾಪನದಲ್ಲಿ ಇಬ್ಬರು ಗುತ್ತಿಗೆದಾರರು ಅರ್ಹರಾಗಿದ್ದು, (1) ಶ್ರೀ.ಜಿ.ಜಯರಾಮ್, (2) ಶ್ರೀ.ಕೆ.ಸೋಮಪ್ಪ, ಅರ್ಹರಾದ ಇಬ್ಬರು ಗುತ್ತಿಗೆದಾರರ ಆರ್ಥಿಕ ಬಿಡ್‌ಗಳನ್ನು ದಿನಾಂಕ:04/02/08 ರಂದು ತೆರೆಯಲಾಗಿರುತ್ತದೆ. ಇಬ್ಬರು ಗುತ್ತಿಗೆದಾರರು ನಮೂದಿಸಿರುವ ದರಗಳು ಕೆಳಕಂಡಂತಿವೆ.

(1) ಶ್ರೀ.ಜಿ.ಜಯರಾಮ್ ರವರು ಒಟ್ಟು ರೂ.1,25,45,696.00 ನಮೂದಿಸಿದ್ದು, 07-08ನೇ ಸಾಲಿನ ದರ ಪಟ್ಟಿಗೆ ಶೇ.52.72% ರಷ್ಟು ಹೆಚ್ಚಾಗಿದ್ದು, 07-08ನೇ ಸಾಲಿನ ದರ ಹಾಗೂ ಸಿಮೆಂಟ್, ಬಿಟುಮಿನ್ ವ್ಯತ್ಯಾಸ ದರಗಳಿಗೆ ಶೇ. 42.36% ರಷ್ಟು ಹೆಚ್ಚಾಗಿರುತ್ತದೆ.

(2) ಶ್ರೀ.ಕೆ.ಸೋಮಪ್ಪ ರವರು ಒಟ್ಟು ರೂ.1,34,01,914.30 ನಮೂದಿಸಿದ್ದು, 07-08ನೇ ಸಾಲಿನ ದರ ಪಟ್ಟಿಗೆ ಶೇ.63.14% ರಷ್ಟು ಹೆಚ್ಚಾಗಿದ್ದು, 07-08ನೇ ಸಾಲಿನ ಹಾಗೂ ಸಿಮೆಂಟ್, ಬಿಟುಮಿನ್ ವ್ಯತ್ಯಾಸ ದರಗಳಿಗೆ ಶೇ.52.07% ರಷ್ಟು ಹೆಚ್ಚಾಗಿರುತ್ತದೆ.

ಸದರಿ ಕಾಮಗಾರಿಗೆ ಶ್ರೀ. ಜಿ. ಜಯರಾಮ್ ರವರು ಕನಿಷ್ಟ ದರ ನಮೂದಿಸಿರುವ ಗುತ್ತಿಗೆದಾರರಾಗಿದ್ದು, ಇದನ್ನು 2007-08ನೇ ಸಾಲಿನ ದರ ಹಾಗೂ ಸಿಮೆಂಟ್, ಬಿಟುಮಿನ್ ವ್ಯತ್ಯಾಸ ದರಗಳಿಗೆ ಹೋಲಿಸಿದಲ್ಲಿ ಶೇ.42.36% ರಷ್ಟು ಹೆಚ್ಚಿಗೆ ದರವನ್ನು ನಮೂದಿಸಿರುತ್ತಾರೆ. ತದರನ್ವಯ ದಿನಾಂಕ:17/03/08 ರಂದು ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲಾಗಿದ್ದು, ಸದರಿ ಗುತ್ತಿಗೆದಾರರು ನಮೂದಿಸಿರುವ ದರಗಳನ್ನು ಶೇ.19.95% ಕ್ಕೆ ಇಳಿಸಿ ಸಂಧಾನ ಪತ್ರವನ್ನು ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಗುತ್ತಿಗೆದಾರರಾದ ಶ್ರೀ. ಜಿ. ಜಯರಾಮ್ ರವರ ಗುತ್ತಿಗೆಯ ಮೊತ್ತ ರೂ.1,05,70,843.00 ಗಳಾಗಿದ್ದು, ಇದನ್ನು 07-08ರ ಸಾಲಿನ ದರ ಸೂಚಿ ಹಾಗೂ ಸಿಮೆಂಟ್, ಬಿಟುಮಿನ್ ವ್ಯತ್ಯಾಸ ದರ ರೂ.88,12,708.24 ಗಳಿಗೆ ಹೋಲಿಸಿದಾಗ ಶೇ.19.95% ರಷ್ಟು ಹೆಚ್ಚಿರುವ ಈ ಟೆಂಡರ್‌ನ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:01/04/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:01/04/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೆಂಗಳೂರು ಮಹಾನಗರ ಪಾಲಿಕೆ



## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:17/04/2008 ರ ನಡವಳಿಗಳು

**ವಿಷಯ ಸಂಖ್ಯೆ:37/2008–09**

ಬಳ್ಳಾರಿ ರಸ್ತೆಯ ಸರಪಳಿ 5.50 ಕಿ.ಮೀ. ನಿಂದ ಸರಪಳಿ 7.33 ಕಿ.ಮೀ. ವರವಿಗಿನ ಎರಡು ಬದಿಗಳಿಗೆ ಬ್ಯಾರಿಕೇಡಿಂಗ್ ಅಳವಡಿಸುವ ಬಗ್ಗೆ.

**ಪ್ರಸ್ತಾವನೆ:**

ದೇವನಹಳ್ಳಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಸಾರ್ವಜನಿಕರ ಉಪಯೋಗಕ್ಕೆ ಮಾರ್ಚ್ 2008ರ ಅಂತ್ಯಕ್ಕೆ ಒದಗಿಸಲು ಯೋಜಿಸಿರುವುದರಿಂದ, ಬಳ್ಳಾರಿ ರಸ್ತೆಯನ್ನು Ch 5.50 Km. ನಿಂದ 7.33 Km. ವರೆಗೆ ರಸ್ತೆ ಅಗಲೀಕರಣ ಮತ್ತು ಅಭಿವೃದ್ಧಿ ಕಾಮಗಾರಿಯು ವಿವಿಧ ಹಂತಗಳಲ್ಲಿರುತ್ತದೆ. ಈ ರಸ್ತೆಯು ದೇವನಹಳ್ಳಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಮುಖ್ಯ ಮಾರ್ಗವಾಗಿದ್ದು, ಸದರಿ ರಸ್ತೆಯು ರಾಷ್ಟ್ರೀಯ ಹೆದ್ದಾರಿಯ ಗುಣಮಟ್ಟವನ್ನು ಹೊಂದಿರಬೇಕಾಗಿರುತ್ತದೆ. ಆದ ಕಾರಣ ಈ ರಸ್ತೆಯ ಕ್ಯಾರಿಯೇಜ್–ವೇ ನ ಎರಡು ಬದಿಗೆ, ರಸ್ತೆಯ ಸುರಕ್ಷಿತಾ ದೃಷ್ಟಿಯಿಂದ ಬ್ಯಾರಿಕೇಡಿಂಗ್‌ಗಳನ್ನು ಅಳವಡಿಸುವ ಅಗತ್ಯವಿರುತ್ತದೆ. ಸದರಿ ಕಾಮಗಾರಿಯ ಸಲುವಾಗಿ 2007–08 ನೇ ಸಾಲಿನ ದರಪಟ್ಟಿಯಂತೆ ಹಾಗೂ ಅನುಮೋದಿತ ಡೇಟಾ ದರಗಳಂತೆ ರೂ.85.00 ಲಕ್ಷಗಳ ಅಂದಾಜುಪಟ್ಟಿಗಳನ್ನು ತಯಾರಿಸಲಾಗಿರುತ್ತದೆ. ಸದರಿ ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:01/04/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:01/04/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳನ್ನು ಚಲಾಯಿಸಿ ಆಡಳಿತಗಾರರ17/04/2008 ರ ನಡವಳಿಗಳು**

**ವಿಷಯ: ಸಂಖ್ಯೆ:38/2008–09**

ಹೊಸೂರು ರಸ್ತೆಯಲ್ಲಿ Double Wall Corrugated pipe ಗಳನ್ನು ಅಳವಡಿಸುವ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ರಸ್ತೆ ಅಗಲಿಕರಣ ಪ್ರಸ್ತಾವನೆಯಿರುವ ಹೊಸೂರು ರಸ್ತೆಯಲ್ಲಿ Double Wall Corrugated pipe ಗಳನ್ನು ಅಳವಡಿಸಲು ಯೋಜಿಸಲಾಗಿರುತ್ತದೆ. ಸದರಿ ಕಾಮಗಾರಿಗಳಿಗೆ 2007–08ನೇ ಸಾಲಿನ ದರಪಟ್ಟಿಯಂತೆ ನಾಲ್ಕು ಅಂದಾಜುಪಟ್ಟಿಗಳನ್ನು ತಯಾರಿಸಲಾಗಿದ್ದು, ಕಾಮಗಾರಿ ಸಂಕೇತಗಳನ್ನು ಪಡೆಯಲಾಗಿರುತ್ತದೆ. ಅಂದಾಜು ಪಟ್ಟಿಗಳ ವಿವರಗಳು ಕೆಳಕಂಡಂತಿವೆ.

| ಕ್ರಸಂ. | ಕಾಮಗಾರಿಯ ಹೆಸರು | ಅಂದಾಜುಪಟ್ಟಿಯ ಮೊತ್ತ (ಲಕ್ಷಗಳಲ್ಲಿ) | ಕಾಮಗಾರಿ ಸಂಕೇತ |
|---|---|---|---|
| 1 | Providing utility cable ducts & chambers for BESCOM cables & other utility cables in Hosur Road LHS from Ayappa Temple to C.S.B. junction. | 68.33 | 000-08-N-J-I-R-WD-037 |
| 2 | Providing utility cable ducts & chambers for BESCOM cables & other utility cables in Hosur Road RHS from Ayappa temple to C.S.B. junction. | 68.33 | 000-08-N-J-I-R-WD-038 |
| 3 | Providing utility cable ducts & chambers for BESCOM cables & other utility cables in Hosur Road RHS from Yankey Factory Junction to Ayappa temple. | 68.33 | 000-08-N-J-I-R-WD-039 |
| 4 | Providing utility cable ducts & chambers for BESCOM cables & other utility cables in Hosur Road LHS from Yankey Factory Junction to Ayappa temple. | 68.33 | 000-08-N-J-I-R-WD-040 |

ಸದರಿ ಕಾಮಗಾರಿಗಳ ಅಂದಾಜುಪಟ್ಟಿಗಳನ್ನು ಲೋಕೋಪಯೋಗಿ ಇಲಾಖೆಯ 2007–08 ನೇ ಸಾಲಿನ ದರಪಟ್ಟಿಯಂತೆ ತಯಾರಿಸಿದ್ದು, ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:01/04/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:01/04/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೆಂಗಳೂರು ಮಹಾನಗರ ಪಾಲಿಕೆ

83

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: 17/04/2008 ರ ನಡವಳಿಗಳು**

**ವಿಷಯ ಸಂಖ್ಯೆ:39/2008–09**

Providing utility cable ducts & chambers for BESCOM & other utility cables in Race course road from 0.30 Km to 1.66 Km on south side (RHS) in Bangalore ಕಾಮಗಾರಿಯ ಬಗ್ಗೆ.

**ಪ್ರಸ್ತಾವನೆ:**

Providing utility cable ducts & chambers for BESCOM & other utility cables in Race course road from 0.30 Km to 1.66 Km on south side (RHS) in Bangalore ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ರೂ.98.86ಲಕ್ಷಗಳಿಗೆ ಕಾರ್ಯಪಾಲಕ ಅಭಿಯಂತರರು (ರಸ್ತೆ ಅಗಲೀಕರಣ) ರವರು ಅಂದಾಜುಪಟ್ಟಿಯ ಪ್ರಕ್ರಿಯೆಯನ್ನು ಕೈಗೊಂಡಿದ್ದು, ಸದರಿ ಟೆಂಡರಿನಲ್ಲಿ ಇಬ್ಬರು ಗುತ್ತಿಗೆದಾರರು ಮಾತ್ರ ಭಾಗವಹಿಸಿದ್ದು. ಅವರುಗಳು 1) ಶ್ರೀ. ಎನ್.ಬಿ. ನಾಗರಾಜ್, 2) ಶ್ರೀ. ಶ್ರೀಧರ್ ಚೌದ್ರಿ, ಅರ್ಹರಾದ ಇಬ್ಬರು ಗುತ್ತಿಗೆದಾರರ ಆರ್ಥಿಕ ಬಿಡ್‌ಗಳನ್ನು ದಿನಾಂಕ:25/03/08 ರಂದು ತೆರೆಯಲಾಗಿರುತ್ತದೆ. ಇಬ್ಬರು ಗುತ್ತಿಗೆದಾರರು ನಮೂದಿಸಿರುವ ದರಗಳು ಕೆಳಕಂಡಂತಿವೆ.

(1) ಶ್ರೀ. ಎನ್.ಬಿ. ನಾಗರಾಜ್ ರವರು ಒಟ್ಟು ರೂ.1,72,12,478.50 ನಮೂದಿಸಿದ್ದು, ಇದು 07–08ನೇ ಸಾಲಿನ ದರ ಪಟ್ಟಿಗೆ ಶೇ.74.11% ರಷ್ಟು ಹೆಚ್ಚಾಗಿರುತ್ತದೆ.

(2) ಶ್ರೀ. ಶ್ರೀಧರ್ ಚೌದ್ರಿ ರವರು ಒಟ್ಟು ರೂ.1,38,37,327.44 ನಮೂದಿಸಿದ್ದು, ಇದು 07–08ನೇ ಸಾಲಿನ ದರ ಪಟ್ಟಿಗೆ ಶೇ.39.97% ರಷ್ಟು ಹೆಚ್ಚಾಗಿರುತ್ತದೆ.

ಸದರಿ ಕಾಮಗಾರಿಗೆ ಶ್ರೀ. ಶ್ರೀಧರ್ ಚೌದ್ರಿ ರವರು ಕನಿಷ್ಠ ದರ ನಮೂದಿಸಿರುವ ಗುತ್ತಿಗೆದಾರರಾಗಿದ್ದು, 2007–08ನೇ ಸಾಲಿನ ದರಸೂಚಿಗೆ ಹೋಲಿಸಿದಲ್ಲಿ ಶೇ. 39.97% ರಷ್ಟು ಹೆಚ್ಚಿಗೆ ದರವನ್ನು ನಮೂದಿಸಿರುತ್ತಾರೆ. ಅದ್ದರಿಂದ ದಿನಾಂಕ:01/04/08 ರಂದು ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲಾಗಿದ್ದು, ಸದರಿ ಗುತ್ತಿಗೆದಾರರು ನಮೂದಿಸಿರುವ ದರಗಳನ್ನು ಶೇ.39.97% ರಿಂದ ಶೇ.19.50% ಗೆ ಇಳಿಸಿ ಸಂಧಾನ ಪತ್ರವನ್ನು ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಗುತ್ತಿಗೆದಾರರಾದ ಶ್ರೀ. ಶ್ರೀಧರ್ ಚೌದ್ರಿ ರವರ ಗುತ್ತಿಗೆಯ ಮೊತ್ತ ರೂ.1,18,13,739.00 ಗಳಾಗಿದ್ದು, ಇದನ್ನು 07–08ನೇ ಸಾಲಿನ ದರ ಸೂಚಿ ಮೊತ್ತ ರೂ.98,85,974.27 ಗಳಿಗೆ ಹೋಲಿಸಿದಾಗ ಶೇ.19.50% ರಷ್ಟು ಹೆಚ್ಚಿರುವ ಈ ಟೆಂಡರ್‌ನ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:01/04/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:01/04/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು